ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ: ಕಾಶಿಇ/ಮಾತಂವಿ/42/ಲ್ಯಾಪ್‌ಟಾಪ್/2016-17.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು. ದಿ:04/04/2017.

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ./ಪ.ಪಂಗಡದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಇ-ಕಂಟೆಂಟ್ ತುಂಬಿಸಿದ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂ: ಇಡಿ 4 ಹೆಚ್‌ಪಿಸಿ 2017, ಬೆಂಗಳೂರು. ದಿ:18/02/2017.

>>><<

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಮೃದು ಕೌಶಲ್ಯ ಮತ್ತು ಪಠ್ಯಕ್ರಮಕ್ಕನುಗುಣವಾಗಿ ಇ-ಕಂಟೆಂಟ್ ತುಂಬಿಸಿದ 25,276 ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಸರ್ಕಾರವು ಅನುಮತಿ ನೀಡಿರುತ್ತದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಈಗಾಗಲೇ ಅಧೀನ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಿಂದ ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪ್ರಥಮ ಪದವಿ ವಿದ್ಯಾರ್ಥಿಗಳ ಮಾಹಿತಿಯನ್ನು ಸ್ವೀಕರಿಸಿ, ಕಾಲೇಜುವಾರು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಕಾಲೇಜುವಾರು ತಯಾರಿಸಲಾದ ಪಟ್ಟಿಯನ್ನು ಕಾಲೇಜುಗಳಿಗೆ ಪ್ರತ್ಯೇಕವಾಗಿ ಇ-ಮೇಲ್ ಮುಖಾಂತರ PDF Format ನಲ್ಲಿ ಕಳುಹಿಸುತ್ತಿದ್ದು, ಸದರಿ ಪಟ್ಟಿಯ ಪ್ರಿಂಟ್ ತೆಗೆದುಕೊಂಡು, ನ್ಯೂನತೆಗಳಿದ್ದಲ್ಲಿ (ಹೆಸರು ಬಿಟ್ಟು ಹೋಗಿದ್ದಲ್ಲಿ/ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದಲ್ಲಿ/ಪುನರಾವರ್ತನೆಯಾಗಿದ್ದಲ್ಲಿ/ಸಲ್ಲಿಸಿರುವ ಮಾಹಿತಿಯಲ್ಲಿ ತಪ್ಪುಗಳಿದ್ದಲ್ಲಿ) ಮತ್ತೊಮ್ಮೆ ಪರಿಶೀಲಿಸಿ ಪಟ್ಟಿಯಲ್ಲಿಯೇ ತಿದ್ದುಪಡಿ ಮಾಡಿ ದೃಢೀಕರಿಸಿ, ದೃಢೀಕೃತ ಪ್ರತಿಯನ್ನು ಸ್ಕ್ಯಾನ್ ಮಾಡಿ ದಿನಾಂಕ:12/04/2017ರೊಳಗಾಗಿ ಇ-ಮೇಲ್ ಮುಖಾಂತರ dce.info2016@gmail.com ಗೆ ಕಳುಹಿಸುವುದು. ಈ ಬಗ್ಗೆ ಪ್ರಾಂಶುಪಾಲರು ತಮ್ಮ ಆದ್ಯಗಮನವನ್ನು ಹರಿಸಿ ನಿಗದಿತ ದಿನಾಂಕದೊಳಗೆ ದೃಢೀಕೃತ ಪ್ರತಿಯನ್ನು ಇ-ಮೇಲ್ ಮುಖಾಂತರ ಕೇಂದ್ರಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರಥಮ ಪದವಿ ಹಾಗೂ ಪ್ರಥಮ ವರ್ಷದ ವಿಜ್ಞಾನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಕಾಲೇಜುಗಳ ಹಂತದಲ್ಲಿ ಪಡೆದುಕೊಳ್ಳಬೇಕಾದ ವಿವರಗಳ ನಮೂನೆಯನ್ನು ಈ ಸುತ್ತೋಲೆಗೆ ಅನುಬಂಧಿಸಲಾಗಿದ್ದು, ಪ್ರತಿ ವಿದ್ಯಾರ್ಥಿಯಿಂದ ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ವಿವರಗಳನ್ನು ಹಾಗೂ ಅಗತ್ಯ ದಾಖಲಾತಿಗಳನ್ನು ಪಡೆದು ಸಂಗ್ರಹಿಸಿ, ಲ್ಯಾಪ್‌ಟಾಪ್‌ಗಳ ವಿತರಣೆ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗೆ ವಿತರಿಸುವ ಲ್ಯಾಪ್‌ಟಾಪ್ Serial number ಅನ್ನು ದಾಖಲಿಸಿ, ವಿದ್ಯಾರ್ಥಿಗಳಿಂದ ಸ್ವೀಕೃತಿ ಸಹಿ ಪಡೆದು ಪ್ರಾಂಶುಪಾಲರು ದೃಢೀಕರಿಸಿ ಕಾಲೇಜಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುವಂತೆ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ

1. ಇಲಾಖಾವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ– ಮಾಹಿತಿ & ಅಗತ್ಯಕ್ರಮಕ್ಕಾಗಿ.
2. ಇಲಾಖಾವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿಗಾಗಿ

ಪ್ರತಿಯನ್ನು

1. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತಶಾಖೆಗೆ– ಮಾಹಿತಿಗಾಗಿ
2. ಕಛೇರಿ ಪ್ರತಿ

Government of Karnataka

# Department of Collegiate Education

Passport size Photo

**Student Information for issue of FREE LAPTOP COMPUTER for SC/ ST Students under SCP/ TSP Scheme**

| Sl. No. | **Name of the College:** | |
|---|---|---|
| 1 | Name of the Student (In Capital Letters) | |
| 2 | Gender | Male: ☐ Female: ☐ |
| 3 | Father's Name | |
| 4 | Caste/ Category (Supported by Cast Certificate issued by Tahasildar) | SC: ☐ ST: ☐ |
| 5 | Annual Income (Supported by Income Certificate issued by Tahasildar) | Less than Rs 2.5 lakh: ☐<br>More than or Equel toRs 2.5 lakh: ☐ |
| 6 | Percentage of Marks obtained in II PUC or Equivalent Exam (Supported by Marks Card) | |
| 7 | State in which Caste Certificate is Issued | Karnataka: ☐<br>Outside Karnataka: ☐ |
| 8 | Stream | Science: ☐<br>Arts: ☐<br>Commerce: ☐ |
| 9 | Course | Post Graduation: ☐<br>Under Graduation: ☐ |
| 10 | Remarks | |

Signature of the Student

| **Office Use Only** | | |
|---|---|---|
| 1 | Laptop Serial Number | |
| 2 | Date of Issue of Laptop | |
| 3 | Issued by (Name and Signature of the Staff) | |

Signature of the Student
(for having received the Laptop Computer in Working Condition)